2) ಲ್ಯಾಬ್ ಸೌಲಭ್ಯವಿದೆ;

ಆ್ಯಂಬುಲೆನ್ಸ್ ಒಂದು ಲಭ್ಯವಿದೆ;

ಔಷಧ ಸಾಮಾಗ್ರಿಗಳು ಲಭ್ಯ ಇದೆ;

ಕೊರತೆ ಇರುವುದಿಲ್ಲ.

**ಹಾವೇರಿ ಜಿಲ್ಲಾ ಶಿಗ್ಗಾಂವ ತಾಲ್ಲೂಕ ಪಂಚಾಯತ್ ವಿಸರ್ಜನೆ**

427 (685) ಶ್ರೀ ಮಂಜುನಾಥ ಸಿ. ಕನ್ನೂರ್ (ಶಿಗ್ಗಾಂವ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಶಿಗ್ಗಾಂವ್ ತಾಲ್ಲೂಕು ಪಂಚಾಯತ್ ಸಮಿತಿಯನ್ನು ವಿಸರ್ಜಿಸಲು ಧಾರವಾಡ ಜಿಲ್ಲಾ ಪಂಚಾಯತ್ ದಿಂದ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆಯೇ?

2) ಶಿಗ್ಗಾಂವ ತಾಲ್ಲೂಕು ಪಂಚಾಯತ್ ವಿಸರ್ಜಿಸಲು ಶಿಗ್ಗಾಂವ ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯದರ್ಶಿ ಹಾಗೂ ಅಧಿಕಾರಿಗಳಿಂದ ಹಾಗೂ ಧಾರವಾಡ ಜಿಲ್ಲಾ ಪಂಚಾಯತ್ ದಿಂದ ಎಷ್ಟು ಬಾರಿ ಸರ್ಕಾರಕ್ಕೆ ವರದಿ ಮಾಡಲಾಗಿದೆ?

3) ಶಿಗ್ಗಾಂವ ತಾಲ್ಲೂಕು ಪಂಚಾಯತ್ ಸಮಿತಿಯವರು ತೆಗೆದುಕೊಂಡ ಕಾನೂನು ಬಾಹಿರ ನಿರ್ಣಯಗಳೇನು?

4) ಈ ಬಗ್ಗೆ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿನ ಶಿಫಾರಸ್ಸುಗಳು ಏನು?

5) ಶಿಗ್ಗಾಂವ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ವರ್ಗಾವಣೆ 3 ವರ್ಷಗಳಲ್ಲಿ ಎಷ್ಟು ಬಾರಿ ಮಾಡಲಾಗಿದೆ?

6) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

1) ಇಲ್ಲ

2) ಇಲ್ಲ

3) ದಿನಾಂಕ 7.7.97ರ ಸಭೆಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ಕಲ್ಪಿಸಿದ ಮೀಸಲಾತಿ ಪ್ರಮಾಣವನ್ನು ಸಡಿಲಿಸಬೇಕೆಂಬ ತಿರ್ಮಾನ ತೆಗೆದುಕೊಂಡಿದ್ದು ನಂತರ ಅಂತರಹ ನಿರ್ಣಯ ನಿಯಮಗಳಿಗೆ ವ್ಯತಿರಿಕ್ತ ಎಂದು ಕಂಡು ಬಂದದ್ದರಿಂದ ತೀರ್ಮಾನವನ್ನು ತಾಲ್ಲೂಕು ಪಂಚಾಯಿತಿಯು ರದ್ದುಪಡಿಸಲು ಉದ್ದೇಶಿಸಿದೆ. ಮತ್ತು ತೀರ್ಮಾನವನ್ನು ಕಾರ್ಯಗತಗೊಳಿಸಿರುವುದಿಲ್ಲ.

4) ಎರಡು ಬಾರಿ

5) ತಾಲ್ಲೂಕು ಪಂಚಾಯತ್‌ಗೆ ಸೂಕ್ತ ತಿಳುವಳಿಕೆ ನೀಡಲಾಗುವುದು.